

# ಡ್ರಗ್ಸ್

## ಮೃತ್ಯುಕೂಪದ ದಾರಿಯಲ್ಲಿ ಕಡಬಮ್ಸ್ ಎಚ್ಚರಿಕೆ ಫಲಕ!

**ಡ್ರಗ್ಸ್ ಬಲಿಪಶುಗಳ ಸಂಖ್ಯೆ ದಿನದಿಂದ ದಿನಕ್ಕೆ ಹೆಚ್ಚುತ್ತಲೇ ಇದೆ. ಇದರಿಂದ ಮಾನಸಿಕ ರೋಗಿಗಳ ಸಂಖ್ಯೆ ಹೆಚ್ಚುತ್ತಿದೆ. ಬೆಂಗಳೂರಿನ ಕನಕಪುರ ರಸ್ತೆಯಲ್ಲಿರುವ ಕಡಬಮ್ಸ್ ಮಾದಕ ವ್ಯಸನ ನಿರ್ಮೂಲನ ಹಾಗೂ ಪುನರ್ವಸತಿ ಕೇಂದ್ರ ಈ ಕುರಿತು ಅರಿವು ಮೂಡಿಸುವ ಕಾರ್ಯಕ್ರಮಗಳ ಜೊತೆಗೆ ಚಿಕಿತ್ಸೆ ನೀಡಿ ಇಂಥವರನ್ನು ಸಮಾಜದ ಮುಖ್ಯವಾಹಿನಿಗೆ ತರುವ ಕೆಲಸವನ್ನೂ ಮಾಡುತ್ತಿದೆ.**

■ ಉಮಾ ಅನಂತ್

ಶಾಲಾ ಮಕ್ಕಳಿಂದ ಹಿಡಿದು ಸಮಾಜದ ವಿವಿಧ ಸ್ತರಗಳ ಮಂದಿ ಇಂದು ಮಾದಕ ವ್ಯಸನಗಳಿಗೆ ಒಳಗಾಗುತ್ತಿದ್ದಾರೆ. ಗಾಂಜಾ, ಡ್ರಗ್ಸ್, ಆಲ್ಕೋಹಾಲ್, ತಂಬಾಕು, ಸಿಗರೇಟು ಸೇರಿದಂತೆ ಅನೇಕ ಚಟಗಳಿಗೆ ತುತ್ತಾಗುವ ಮಂದಿ ಈ ವ್ಯಸನಗಳಿಗೆ ಸಂಪೂರ್ಣ ದಾಸರಾಗುತ್ತಿದ್ದಾರೆ. ಈ ವ್ಯಾಧಿಯಿಂದ ಹೊರಗೆ ಬರಲು ಆಗದೆ, ಮಾನಸಿಕವಾಗಿ, ಆರ್ಥಿಕವಾಗಿ, ಸಾಮಾಜಿಕವಾಗಿ, ಕೌಟುಂಬಿಕವಾಗಿ ಇತರರಿಂದ ದೂರವಿರಬೇಕಾದ ಪರಿಸ್ಥಿತಿ ಬಂದಿದೆ. ಇದರಿಂದಾಗಿ ಮಾನಸಿಕ ರೋಗ ಇವರಿಗೆ ಕಾಯಂ ಆಗಿ ಅಂಟಿಕೊಂಡಿದೆ.

ಇಂತಹ ವ್ಯಸನಗಳಿಂದ ಬಿಡಿಸಿ ಅಡಿಕ್ಟ್ ಆದ ಜನರನ್ನು ಸರಿದಾರಿಗೆ ತರುವ ಕೆಲಸ ಸುಲಭದ್ದಲ್ಲ. ಇಂಥವರಿಗೆ ಪುನರ್ವಸತಿ ಕೇಂದ್ರಗಳ ಸಹಾಯ ಬೇಕು. ಬೆಂಗಳೂರಿನ ಕನಕಪುರ ರಸ್ತೆಯಲ್ಲಿರುವ 'ಕಡಬಮ್ಸ್' ಮಾನಸಿಕ ಪುನರ್ವಸತಿ ಮತ್ತು ಆರೋಗ್ಯ ಕೇಂದ್ರ ಈ ಕೆಲಸವನ್ನು ದಶಕಗಳಿಂದಲೂ ಮಾಡುತ್ತಾ ಬಂದಿದೆ.

> ನಮ್ಮ ದೇಶದ ಶೇ.15ರಷ್ಟು ಪುರುಷರು ಮದ್ಯಪಾನಿಗಳು. ಮಹಿಳೆಯರಿಗೆ ಹೋಲಿಸಿದರೆ 17 ಪಟ್ಟು ಹೆಚ್ಚು. ಇವರಲ್ಲಿ ಶೇ.5ರಷ್ಟು ಮಂದಿಗೆ ಚಿಕಿತ್ಸೆಯ ಅಗತ್ಯವಿದೆ.

'ಮಾನಸಿಕ ರೋಗ ಬಂದವರು ಸರಿಯಾದ ಚಿಕಿತ್ಸೆ ಪಡೆಯದಿದ್ದರೆ ಅವರಿಗೆ ಸಮಾಜದಲ್ಲಿ ಎಲ್ಲರಂತೆ ಬಾಳಿ ಬದುಕಲು ಚೈತನ್ಯ ಇರುವುದಿಲ್ಲ. ಆಪ್ತಸಲಹೆ, ಮಾನಸಿಕ ಚಿಕಿತ್ಸೆ ಹಾಗೂ ಸರಿಯಾದ ಔಷಧಿಗಳನ್ನು ನೀಡಿ ಇಂಥವರನ್ನು ಸಮಾಜದ ಮುಖ್ಯವಾಹಿನಿಗೆ ತರಬೇಕಾಗುತ್ತದೆ. ಸರಿಯಾದ ಚಿಕಿತ್ಸೆ ಪಡೆಯದೇ ಇರುವವರಿಗೆ ಜೀವನದಲ್ಲಿ ಆತ್ಮವಿಶ್ವಾಸವೂ ಇರುವುದಿಲ್ಲ. ಕೀಳರಿಮೆ, ಖಿನ್ನತೆ ಕಾಡುತ್ತದೆ' ಎನ್ನುತ್ತಾರೆ ಕಡಬಮ್ಸ್ ಮಾನಸಿಕ ಆರೋಗ್ಯ ಸಂಸ್ಥೆಯಲ್ಲಿ ವೈದ್ಯಕೀಯ ನಿರ್ದೇಶಕರಾದ ಡಾ. ಸುನಿಲ್.

'ಮಾದಕ ವ್ಯಸನ ಅಂಟಿಕೊಂಡು ಮಾನಸಿಕ ಕಾಯಿಲೆಗೆ ತುತ್ತಾಗುವುದು 14 ವರ್ಷದ ಹುಡುಗರಿಂದ 25 ವರ್ಷದವರವರೆಗೂ ಹೆಚ್ಚಾಗಿ ಕಂಡುಬರುತ್ತದೆ.